ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

---

ಸಂ:ಕಂ:ಹ.ಬ.ವಿವಾದ: 142/2014-15 ದಿ: 27-05-2016

ಉಪಸ್ಥಿತರು: ಜಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**

1) ದಣ್ಣಿ ಲಿಂಗಮ್ಮ ಗಂಡ: ಲೇಟ್ ದಣ್ಣಿ ಈರಣ್ಣ
ಕೆ.ಬೆಳಗಲ್ ಗ್ರಾಮ, ಸಿರುಗುಪ್ಪ ತಾಲೂಕ
2) ದಣ್ಣಿ ಅಂಬಣ್ಣ ತಂದೆ: ಲೇಟ್ ದಣ್ಣಿ ಮುಕ್ಕಣ್ಣ
ಕೆ. ಬೆಳಗಲ್ ಗ್ರಾಮ , ಸಿರುಗುಪ್ಪ ತಾಲೂಕ

**ಪ್ರತಿವಾದಿಗಳು**

ಶಿವಮ್ಮ
ತಂದೆ: ದಣ್ಣಿ ಪೊಂಪಣ್ಣ
ಕೆ.ಬೆಳಗಲ್ ಗ್ರಾಮ
ಸಿರುಗುಪ್ಪ ತಾಲೂಕ

## ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ | ವಹಿವಾಡು ಸಂಖ್ಯೆ |
|---|---|---|---|---|
| ಕಂಚಿಗಾರ ಬೆಳಗಲ್ ಗ್ರಾಮ | 292/C | 1-12 | H-154/2013-14 | 355/2013-14 |

**ಪೀಠಿಕೆ:-**

ಸಿರುಗುಪ್ಪ ತಾಲೂಕಿನ **ಕೆ. ಬೆಳಗಲ್ ಗ್ರಾಮದ ಸ.ನಂ. 292/C** ವಿಸ್ತೀರ್ಣ **1-12** ಸೆಂಟ್ಸ್ ಜಮೀನಿಗೆ ಸಂಭಂದಿಸಿದಂತೆ **ಪೋತಿ ವಾರಸತ್ವ ಪ್ರಕಾರ** ರಂದು **ದಣ್ಣಿ ಲಿಂಗಮ್ಮ ಗಂಡ:ಲೇಟ್ ದಣ್ಣಿ ಈರಣ್ಣ ಕೆ.ಬೆಳಗಲ್‌ಗ್ರಾಮ ಇವರ ಹೆಸರಿನಲ್ಲಿ** ಖಾತಬದಲಾವಣೆ ಮಾಡಲು ನಮೂನೆ -21 ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ **ಶಿವಮ್ಮ ತಂದೆ: ದಣ್ಣಿ ಪೊಂಪಣ್ಣ , ಕೆ.ಬೆಳಗಲ್ ಗ್ರಾಮ ಇವರು ದಿ:16-6-2014** ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನು **ದಿ:14-8-2015, 24-10-2015, 8-3-2016 11-3-2016, 28-3-2016, ಮತ್ತು 29-4-2016 ರಂದು ಪ್ರಕರಣಕ್ಕೆ** ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

ವಾದಿಗಳು

ವಾದಿಗಳಾದ ದಣ್ಣಿ ಲಿಂಗಮ್ಮ ಗಂಡ ದಣ್ಣಿ ಈರಮ್ಮ ಲೇಟ್ ಕೆ.ಬೆಳಗಲ್ ಗ್ರಾಮ ಇವರು ಕೆ. ಬೆಳಗಲ್ ಗ್ರಾಮದ ಸ.ನಂ.**292/C** ವಿಸ್ತೀರ್ಣ 1-12 ಸೆಂಟ್ಸ್ ಜಮೀನು ದಣ್ಣಿ ಈರಣ್ಣ ತಂದೆ: ದಣ್ಣಿ ಮುಕ್ಕಣ್ಣ ಇವರ ಹೆಸರಿನಲ್ಲಿದ್ದು ದಿ:3-7-2005 ರಂದು ಮೃತಪಟ್ಟ ಕಾರಣ ಪೋತಿ ಆಧಾರದ ಮೇರೆಗೆ ನನ್ನ ಹೆಸರಿಗೆ ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ಶ್ರೀಮತಿ: ಶಿವಮ್ಮ ಗಂಡ: ದಣ್ಣಿ ಪೊಂಪಣ್ಣ ಕೆ.ಬೆಳಗಲ್ ಗ್ರಾಮ ಇವರು ತಮಗೂ ಪಾಲು ಬರಬೇಕೆಂಬ ಕಾರಣಕ್ಕೆ ದಿ: 16-6-2014 ರಂದು ತಕರಾರು ಅರ್ಜಿ ಸಲ್ಲಿಸಿದ್ದು ಈಗ ದೊಡ್ಡ ಮನುಷ್ಯರ ಪರಿಷ್ಕಾರ ಪ್ರಕಾರ ಇವರಿಗೆ ಕೆ. ಬೆಳಗಲ್ ಗ್ರಾಮದ ಸ.ನಂ. 436ಬಿ ಪೈಕಿ 3-00 ಎಕರೆ ಮತ್ತು 193ಸಿ ಪೈಕಿ 0-56 ಸೆಂಟ್ಸ್ ಜಮೀನು ಬಿಟ್ಟು ಕೊಡುವುದಾಗಿ ಪರಿಷ್ಕಾರ ಮಾಡಿದ ಪ್ರಕಾರ ತಮ್ಮ ತಕರಾರು ಅರ್ಜಿಯನ್ನು ಹಿಂದಕ್ಕೆ ಪಡೆದಿರುವುದಾಗಿ ಕೆ.ಬೆಳಗಲ್ ಗ್ರಾಮದ ಸ.ನಂ.292ಸಿ ವಿಸ್ತೀರ್ಣ 1-12 ಸೆಂಟ್ಸ್ ಜಮೀನು ನನ್ನ ಹೆಸರಿಗೆ ಪಟ್ಟ ವರ್ಗಾವಣೆ ಮಾಡಲು ಪ್ರಮಾಣಪತ್ರ ಸಲ್ಲಿಸಿರುತ್ತಾರೆ.

ಪ್ರತಿವಾದಿಗಳು

ಪ್ರತಿವಾದಿಗಳಾದ ಶಿವಮ್ಮ ತಂಧೆ: ದಣ್ಣಿ ಪೊಂಪಣ್ಣ ಕೆ.ಬೆಳಗಲ್‌ಗ್ರಾಮ ಇವರು ಕೆ.ಬೆಳಗಲ್ ಗ್ರಾಮದ ಸ.ನಂ. **292/C** ವಿಸ್ತೀರ್ಣ 1-12 ಸೆಂಟ್ಸ್ ಜಮೀನು ದಣ್ಣಿ ಈರಣ್ಣ ತಂದೆ: ದಣ್ಣಿ ಮುಕ್ಕಣ್ಣ ಇವರ ಹೆಸರಿನಲ್ಲಿ ಇದ್ದು ದಣ್ಣಿ ಲಿಂಗಮ್ಮ ಗಂಡ: ದಣ್ಣಿ ಈರಣ್ಣ ಲೇಟ್ ಕೆ. ಬೆಳಗಲ್ ಇವರ ಹೆಸರಿಗೆ ಪಟ್ಟ ವರ್ಗಾವಣೆ ಸಮಯದಲ್ಲಿ ನಾನು ತಕರಾರು ಅರ್ಜಿ ದಿ:16-6-2014 ರಂದು ಸಲ್ಲಿಸಿದ್ದು ಈಗ ದೊಡ್ಡ ಮನುಷ್ಯರ ಪರಿಷ್ಕಾರ ಮಾಡಿದ ಪ್ರಕಾರ ಕೆ. ಬೆಳಗಲ್ ಗ್ರಾಮದ ಸ.ನಂ.436ಬಿ ಪೈಕಿ 3-00 ಎಕರೆ ಮತ್ತು 193ಸಿ ಪೈಕಿ 0-56 ಸೆಂಟ್ಸ್ ಜಮೀನು ಬಿಟ್ಟುಕೊಡುವುದಾಗಿ ಪರಿಷ್ಕಾರ ಮಾಡಿದ ಪ್ರಕಾರ ನನ್ನ ತಕರಾರು ಅರ್ಜಿಯನ್ನು ಹಿಂದಕ್ಕೆ ಪಡೆದು ದಣ್ಣಿ ಲಿಂಗಮ್ಮ ಗಂಡ: ದಣ್ಣಿ ಈರಣ್ಣ ಲೇಟ್ ಕೆ.ಬೆಳಗಲ್ ಗ್ರಾಮ ಇವರ ಹೆಸರಿಗೆ ಪಟ್ಟ ವರ್ಗಾವಣೆ ಮಾಡಲು ಪ್ರಮಾಣಪತ್ರ ಸಲ್ಲಿಸಿರುತ್ತಾರೆ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ಸದರಿ ಜಮೀನು **ಪೋತಿ** ವಾರಸತ್ವದ ಪಾಲುವಿಭಾಗ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

# ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಕೆ.ಬೆಳಗಲ್ ಗ್ರಾಮದ ಸ.ನಂ. **292/C** ವಿಸ್ತೀರ್ಣ 1-12 ಜಮೀನು ಪೋತಿ ವಾರಸತ್ವದ ಪಾಲು ವಿಭಾಗ ಪತ್ರದ ಪ್ರಕಾರ ದಣ್ಣಿ ಲಿಂಗಮ್ಮ ಗಂಡ: ಲೇಟ್ ದಣ್ಣಿ ಈರಣ್ಣ ಇವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:27-05-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ತಹಶೀಲ್ದಾರರು
ಸಿರುಗುಪ್ಪ

ಇದರ ಪ್ರತಿಯನ್ನು:

1. ವಾದಿ ಹಾಗೂ ಪ್ರತಿವಾದಿಗಳು
2. ತಹಶೀಲ್ದಾರರ ಕಾರ್ಯಾಲಯ ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನಕ್ರಮಕ್ಕಾಗಿ
3. ಕಛೇರಿ ಕಡತಕ್ಕೆ.